**ಪಿರ್ಯಾದಿಯ ಪ್ರಮಾಣೀಕೃತ ಹೇಳಿಕೆ**

**ದಿಃ 01.08.2026 ರಂದು ಪಿರ್ಯಾದಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ನನ್ನ ಹೇಳಿಕೆಯ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿದ್ದೇನೆ. ಸದರಿ ಪ್ರಮಾಣ ಪತ್ರಿಕೆಯಲ್ಲಿ ಹೇಳಿರುವ ಅಂಶಗಳನ್ನು ನಾನೇ ಹೇಳಿ ಬರೆಸಿದ್ದೇನೆ ಹಾಗೂ ಅವು ಸತ್ಯವಾಗಿವೆ. ಸದರಿ ಪ್ರಮಾಣ ಪತ್ರಿಕೆಗೆ ನಾನು ಸಹಿ ಮಾಡಿದ್ದೇನೆ.**

1. ಪಿರ್ಯಾದಿ ಸಂಸ್ಥೆ ಪರ ಸಾಕ್ಷಿ ನುಡಿಯಲು ನನಗೆ ನೀಡಲಾದ ಅಧಿಕಾರ ಪತ್ರವನ್ನು (Authorization letter)ಅನ್ನು ಹಾಜರುಪಡಿಸಿದ್ದು, ಅದನ್ನು **ನಿಪಿ–1** ಎಂದು ಗುರುತಿಲಾಯಿತು.

2. ಆರೋಪಿ ನೀಡಿದ ಚೆಕ್ ನಂ. 591684 ನ್ನು ಹಾಜರುಪಡಿಸಿದ್ದು, ಅದನ್ನು **ನಿಪಿ–2** ಎಂದು ಹಾಗೂ ಆರೋಪಿಯ ಸಹಿಯನ್ನು **ನಿಪಿ–2(ಎ)** ಎಂದು ಗುರುತಿಸಲಾಯಿತು.

3. ಚೆಕ್ ನಂ. 591684 ರಿಟರ್ನ ಮೆಮೋವನ್ನು ಹಾಜರುಪಡಿಸಿದ್ದು, ಅದನ್ನು **ನಿಪಿ–3** ಎಂದು ಗುರುತಿಲಾಯಿತು.

4. ದಿನಾಂಕ 16.02.2026 ರಂದು ಆರೋಪಿಗೆ ನೊಂದಾಯಿತ ಅಂಚೆ ಮೂಲಕ ನೀಡಿದ ಕಾನೂನು ಬದ್ದ ನೋಟೀಸ್‌ನ ಕಚೇರಿ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು **ನಿಪಿ–4** ಎಂದು ಗುರುತಿಲಾಯಿತು.

5. ಅಂಚೆ ರಶೀದಿಯನ್ನು ಹಾಜರುಪಡಿಸಿದ್ದು, ಅದನ್ನು **ನಿಪಿ–5** ಎಂದು ಗುರುತಿಸಲಾಯಿತು.

6. ಒಂದು ತಿರಸ್ಕೃತ ಅಂಚೆ ಲಕೋಟೆಯನ್ನು ಹಾಜರುಪಡಿಸಿದ್ದು, ಅದನ್ನು ತೆರೆದ ನ್ಯಾಯಾಲಯದಲ್ಲಿ ತೆಗೆದು ನೋಡಲಾಗಿ ಅದರಲ್ಲಿನ ನೋಟಿಸ್ **ನಿಪಿ–4** ಕ್ಕೆ ತಾಳೆ ಇದ್ದು ಸದರಿ ಅಂಚೆ ಲಕೋಟೆಯನ್ನು **ನಿಪಿ–6** ಎಂದು, ಅದರಲ್ಲಿನ ನೋಟಿಸ್ ಅನ್ನು **ನಿಪಿ–6(ಎ)** ಎಂದು ಗುರುತಿಸಲಾಯಿತು.

7. ಆರೋಪಿ ಸಾಲದ ಖಾತೆಗೆ ಸಂಬಂಧಿಸಿದಂತೆ ಲೋನ್ ಅಕೌಂಟ್ ಸ್ಟೇಟಮೆಂಟ್ ಹಾಜರುಪಡಿಸಿದ್ದು, ಅದನ್ನು **ನಿಪಿ–7** ಎಂದು ಗುರುತಿಸಲಾಯಿತು.

ಆದ್ದರಿಂದ ಆರೋಪಿ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಕೋರಿಕೊಳ್ಳುತ್ತೇನೆ.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಗಿದೆ.)**

**ಓ.ಹೇ.ಕೇ.ಸ.ಇ.ಒ.**

**C/c** 1 **ನೇ ಅಪರ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,**
**ಮೈಸೂರು.**